ಸುರತ್ಕಲ್ ಕ್ಷೇತ್ರದಲ್ಲಿ ರಾಜ್ಯಸಭಾ ಸಮಿತಿಯ ಸಭೆಗೆ ಸ್ಥಳೀಯ ಶಾಸಕರಿಗೆ ಆಮಂತ್ರಣ ನೀಡದೇ ಇರುವ ಬಗ್ಗೆ.

ಶ್ರೀ ಸುಂದರ್ ರಾವ್ (ಕುಂಭೆ) : ಮಾನ್ಯ ಅಧ್ಯಕ್ಷರೇ, ಇದೇ ತಿಂಗಳ 7ನೇ ತಾರೀಖು ಸುರತ್ಕಲ್‌ಕ್ಷೇತ್ರದ ಬೃಹತ್ ಕೈಗಾರಿಕೆಗಳ ವೀಕ್ಷಣೆಗಾಗಿ ಸಂತ್ರಸ್ತರ ಸಂಕಷ್ಟದ ವಿಷಯವನ್ನ ವಿವೇಚನೆ ಮಾಡುವುದಕ್ಕಾಗಿ ರಾಜ್ಯಸಭಾ ಸದಸ್ಯರ ಒಂದು ಸಮಿತಿ ಬಂದಿತ್ತು. ಆ ಸಮಿತಿಯಲ್ಲಿ ಭಾಗವಹಿಸಿ ಸಂತ್ರಸ್ತರ ಬಗ್ಗೆ ಅವರ ಸಂಕಷ್ಟದ ಬಗ್ಗೆ ವಿವರಣೆಯನ್ನು ಒದಗಿಸುವ ಅವಕಾಶ ಸ್ಥಳೀಯ ಶಾಸಕನಾಗಿಲ್ಲ. ನನಗೆ ಆ ವಿಷಯವನ್ನು ತಿಳಿಸಲೇ ಇಲ್ಲ. ಇನ್ನು ಸಂತ್ರಸ್ತರ ಸಮಸ್ಯೆ ಹಾಗೆಯೇ ಇದೆ. ಅವರಿಗೆ ಪರಿಹಾರ ಕೊಟ್ಟಿರುವುದರಲ್ಲೂ ಅನ್ಯಾಯವಾಗಿದೆ. ಕೋರ್ಟಿನವರೆಗೆ ಅವರು ಹೋಗಿ ಅಲೆದಾಡುತ್ತಿದ್ದಾರೆ. ಅವರ ಬಗ್ಗೆ ಎರಡು ವಾಕ್ಯ ಹೇಳುವುದಕ್ಕೆ ಅವಕಾಶವನ್ನು ಶಾಸಕನಿಗೆ ಕೊಡದೇ ಕೇವಲ ಜಿಲ್ಲಾಧಿಕಾರಿಗಳು ಬ್ಯಾಂಕಿನವರು ಅವರನ್ನು ರಾಜಮರ್ಯಾದೆಯಿಂದ ಕರೆಸಿ ಅವರಿಗೆ ಏನು ಹೇಳಬೇಕೋ ಹೇಳಿ ಅವರನ್ನು ಹಿಂದೆ ಕಳುಹಿಸಿದ್ದಾರೆ. ಇದು ಶಾಸಕನಿಗೆ ಆದಂಥ ಹಕ್ಕಿನ ಚ್ಯುತಿ ಎಂದು ನಾನು ಗ್ರಹಿಸುತ್ತಿದ್ದೇನೆ. ಈ ಹಿಂದೆಯೂ ಇದು ಪ್ರಸ್ತಾಪವಾಗಿದೆ. ಹಿಂದೆ ನಮ್ಮ ಸಚಿವರು-1 ಆ ಕ್ಷೇತ್ರಕ್ಕೆ ಹೋದಾಗ ನಾನು ಕ್ಷೇತ್ರದ ಶಾಸಕನಿದ್ದಾಗಲೂ ನನ್ನನ್ನು ಕರೆಯುವ ಸೌಜನ್ಯ ತೋರಿಸಲಿಲ್ಲ. ಇಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಿದಾಗ ಮುಂದಕ್ಕೆ ಹಾಗೆ ಆಗುವುದಿಲ್ಲ ಎಂದು ಹೇಳಿ ನನಗೆ ಆಶ್ವಾಸನೆ ಬಂತು. ಈಗ ಮತ್ತೆ ಅದೇ ನಡೆಯುತ್ತಾ ಇದೆ. ಇದಕ್ಕೆ ಯಾರು ಕಾರಣ? ಶಾಸಕರನ್ನು ಕರೆಯದೆ ಹೊರಗಿನವರು ಬಂದು ಕ್ಷೇತ್ರಕ್ಕೆ ಸಂಬಂಧ ಪಟ್ಟ ವಿಷಯ ಸಂಗ್ರಹ ಮಾಡಿದರೆ ಅದು ಸಮರ್ಪಕವಾಗುತ್ತದೆಯೇ? ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಎಂ.ಸಿ. ನಾಣಯ್ಯ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ರಾಜ್ಯಸಭಾ ಸದಸ್ಯರು ಬಂದಿರತಕ್ಕಂಥ ಒಂದು ಸಮಿತಿ. ಆ ಸಮಿತಿ ಬಂದಿರುವ ಸಂದರ್ಭದಲ್ಲಿ ಅವರು ಯಾವ ಯಾವ ಜಿಲ್ಲೆಗೆ ಹೋಗಿ ಯಾವುದರ ವಿಚಾರದಲ್ಲಿ ಚರ್ಚೆ ಮಾಡುತ್ತಾರೆ ಎಂದು ಹೇಳಿ ಜಿಲ್ಲಾಧಿಕಾರಿಗೆ ಕೇಳುತ್ತಾರೆ. ಇವರು ಅಫಿಷಿಯಲ್ ಆಗಿ, ಅಡ್ಮಿನಿಸ್ಟ್ರೇಟಿಲ್ ಆಗಿ ಅವರು ಕೆಲವು ಮಾಹಿತಿಗಳನ್ನು ಪಡೆದುಕೊಂಡು ಹೋಗಲಿಕ್ಕೆ ಬಂದಿರುವುದು. ಆದ್ದರಿಂದ ಈ ಸಂದರ್ಭದಲ್ಲಿ ಬಹುಶಃ ಶಾಸಕರುಗಳನ್ನು, ಮಂತ್ರಿಗಳನ್ನು ಕರೆಯಬೇಕು ಎಂದರೆ ಬಹುಶಃ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅವರು ಬಂದಿದ್ದು ಏಕೆಂದರೆ ಅವರಿಗೆ ಸಿಕ್ಕಿರುವ ಕೆಲವು ಮಾಹಿತಿಯಡಿಯಲ್ಲಿ ಅವರು ಬಂದು ಅವರು ಅವರು ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಆಡಳಿತಕ್ಕೆ ಸಂಬಂಧಪಟ್ಟಂತೆ ಕೆಲವು ಮಾಹಿತಿಗಳನ್ನು ತಿಳಿದುಕೊಂಡು ಅವರು ಒಂದು ವರದಿಯನ್ನು ಕೊಡುತ್ತಾರೆ. ಆ ವರದಿಯನ್ನು ಕೊಡಬೇಕಾಗಿರುವುದು ಲೋಕಸಭೆಗೆ ಅಥವಾ ರಾಜ್ಯಸಭೆಗೆ ಕೊಡಬೇಕಾಗಿರುವ ವರದಿ. ಆ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ, ಬಹುಶಃ ಆಡಳಿತದಲ್ಲಿ ಶಾಸಕರುಗಳನ್ನು ಮತ್ತು ಮಂತ್ರಿಗಳನ್ನು ಕರೆದು ಈ ಒಂದು ಚರ್ಚೆ ಮಾಡಲಿಕ್ಕೆ ಇರುವುದು ಅದರಲ್ಲಿ ಸ್ಕೋಪ್ ಇಲ್ಲದೇ ಇರುವುದರಿಂದ ತಮ್ಮನ್ನು ಕರೆದಿರಲಿಕ್ಕಿಲ್ಲ ಅಷ್ಟೇ.